ಬೀಡಿ ಸೇದುತ್ತಾ ಕೆಲಸವಿಲ್ಲದೆ ಕುಂತ ಯಜಮಾನನ ಮುಖಕ್ಕೆ ಅದೇ ನಾಲಿಗೆಯಿಂದ ಮಸಾಜು ಮಾಡುತ್ತಾ ಆತನನ್ನೂ ಮುದಗೊಳಿಸುತ್ತವೆ.

ನಮ್ಮ ಪೊಲೀಸ್ ಇಲಾಖೆಯಲ್ಲೂ ಈ 'ನಾಯಿ ನಂಟು' ಹೊಸದೇನಲ್ಲ. ಗ್ರಾಮೀಣ ಪ್ರದೇಶಗಳ ಪ್ರತಿ ಠಾಣೆಯಲ್ಲೂ ಒಂದು ಶ್ವಾನವಿರುತ್ತದೆ. ಠಾಣೆಗೆ ಬಂದವರನ್ನು ತನ್ನದೇ ರೀತಿಯಲ್ಲಿ ಬರಮಾಡಿಕೊಳ್ಳುತ್ತದೆ. ಬಂದವನು ಸಭ್ಯನೋ ಅಥವಾ ಕ್ರಿಮಿನಲ್ಲೋ ಎಂದು ಕಣ್ಣಿನಲ್ಲೇ ಅಳೆಯುವ ಕುಶಾಗ್ರಮತಿಗಳೂ ಇವೆ. ಪೊಲೀಸರು ಠಾಣೆಗೆ ಬಂದವರನ್ನು ಮಾತನಾಡಿಸುವ ರೀತಿಯಲ್ಲೇ ಅವನಾರು? ಅವನ ಯೋಗ್ಯತೆಯೇನು? ಎಂಬುದನ್ನು ಅರ್ಥ ಮಾಡಿಕೊಳ್ಳುತ್ತವೆ. ಮತ್ತೊಂದು ಸಾರಿ ಅವನು ಠಾಣೆಗೆ ಬಂದರೆ ನೆನಪಿಟ್ಟುಕೊಂಡು ಬಾಲವಲ್ಲಾಡಿಸಿ ಗೌರವಪೂರ್ವಕವಾಗಿ ಬರಮಾಡಿಕೊಳ್ಳುತ್ತವೆ. ಬಂದವನು ಅಯೋಗ್ಯ ಎಂದಿಟ್ಟುಕೊಳ್ಳಿ. ಅವನನ್ನು ಗುರ್... ಎಂದು ಅಟಕಾಯಿಸಿಕೊಂಡು ಎಲ್ಲರೆದುರು ಅವನ ಮೂರುಕಾಸಿನ ಮರ್ಯಾದೆಯನ್ನೂ ಹಾಳುಮಾಡಿ ಹರಾಜು ಹಾಕುತ್ತವೆ.

ನಗರಗಳಲ್ಲಿ ಅಂತಹ ಸೀನಿಲ್ಲ. ಇಲ್ಲಿನ ಠಾಣೆಗಳಲ್ಲಿ ಜನರು ಗಿಜಿಗುಟ್ಟುವುದರಿಂದ ನಾಯಿಗಳ ಪಾಡು ಕೇಳುವವರಿಲ್ಲ. ಠಾಣೆಗಳಿಗಿಂತ ಹೋಟೆಲು ಅಂಗಡಿ ಮುಂಗಟ್ಟುಗಳೇ ಬೆಟರು ಎಂದು ನಿರ್ಧರಿಸಿ ಅವು ದೂರ ಉಳಿದುಬಿಟ್ಟಿರಲೂಬಹುದು. ಈ ಖಾಕಿಧಾರಿಗಳಿಂದ ನಮಗೇನು ಪ್ರಯೋಜನವಿದೆ? ಎಂದು ತೀರ್ಮಾನಿಸಿದ ಕೆಲ ನಾಯಿಗಳಂತೂ ಯೂನಿಫಾರ್ಮು ಕಂಡರೆ ಸಾಕು ಉರಿದುಬೀಳುತ್ತವೆ. ದಾರಿಯಲ್ಲಿ ಸಾಗುವಾಗ ತೃಪ್ತಿಯಾಗುವವರೆಗೂ ಅಟ್ಟಿಸಿಕೊಂಡು ಬಂದು ಸೇಡುತೀರಿಸಿಕೊಳ್ಳುತ್ತವೆ.

